ಪ್ರಬಂಧ

# ನಾಯಿ ಪಾಠ

■ ಕೆ.ಪಿ. ಮಂಜುನಾಥ್



ನಮ್ಮದು ವಠಾರದ ಮನೆ. ಬೀದಿಯ ನಾಯಿಯೊಂದು ವಠಾರ ಸೇರಿತ್ತು. ರಾಜರತ್ನಂ ಅವರ 'ನಾಯಿಮರಿ ನಾಯಿಮರಿ ತಿಂಡಿ ಬೇಕೆ...' ಪದ್ಯವನ್ನು ಓದುತ್ತಿದ್ದ ನಮಗೆ ಆ ನಾಯಿಯನ್ನು ಕಂಡಾಗ ಸ್ನೇಹಭಾವ. ವಠಾರಕ್ಕೆ ಹೊಸಬರು ಬಂದರೆ ನಮ್ಮನ್ನು ತನ್ನದೇ ಶೈಲಿಯಲ್ಲಿ ಎಚ್ಚರಿಸುತ್ತಿತ್ತು. ಆದರೆ ವಠಾರದ ಕೆಲವರು ಅದನ್ನು ಕಂಡರೆ ಏಳೇಳು ಜನ್ಮದ ವೈರಿಯೇನೋ ಎಂಬಂತೆ ಆಡುತ್ತಿದ್ದರು. ನಾವು ಆಚೆಗೆ ಹೊರಟು ನಿಂತರೆ ತಾನೂ ಬರುವುದಾಗಿ ಬಾಲವಾಡಿಸುತ್ತಿತ್ತು. ಗದರಿಸಿದರೆ ಹೊರಬಾಗಿಲು ದಾಟುತ್ತಿರಲಿಲ್ಲ. ಅದರ ಗುಣ ಮತ್ತು 'ನಾಯಿ ದತ್ತಾತ್ರೇಯನ ಸ್ವರೂಪ'ವೆಂದು ಹಿರಿಯರು ಹೇಳುತ್ತಿದ್ದುದರಿಂದ ನಮ್ಮಲ್ಲಿ ಭಕ್ತಿ, ಪ್ರೀತಿ ಎರಡೂ ಉಂಟಾಗಿತ್ತು.

ದುಬಾರಿ ತಳಿಯ ನಾಯಿಯನ್ನು ಸಾಕುವವರು ಅನೇಕರು. ಈ 'ವಾಕಿಂಗ್' ನಾಯಿಗಳನ್ನು ಹಿಡಿದುಕೊಂಡು ನಡೆಯುವವರ ಮುಖದಲ್ಲಿ ಹೆಮ್ಮೆ ಕುಣಿಯುತ್ತಿರುತ್ತದೆ. ಬೀದಿ ನಾಯಿಗಳು ಅವನ್ನು ಕಂಡು ಬೊಗಳಿದಾಗ ಇವು ಬಾಲ ಮುದುಡಿಕೊಂಡು ಮಾಲೀಕನ ಹಿಂದೆ ಅಡಗಿಕೊಳ್ಳುವುದುಂಟು. ಆಗ ಮಾಲೀಕನ ಕೈಕೋಲು ಬೀದಿ ನಾಯಿಗಳತ್ತ ಗಾಳಿಯಲ್ಲಿ ಸುಯ್ಯುಗುಡುತ್ತ ಮೇಲೇಳುವುದು. ಬೀದಿನಾಯಿಗಳು ಪೆಟ್ಟುಬೀಳದಂತೆ ನುಣುಚಿಕೊಳ್ಳುವುದೇ ಹೆಚ್ಚು. ನಮ್ಮ ನಾಯಿಯೂ ಇಂತಹ ಕಿಲಾಡಿತನ ಮೈಗೂಡಿಸಿಕೊಂಡಿತ್ತು.

ಕನ್ನಡದ ಹಿರಿಯ ವಿದ್ವಾಂಸ ಕೆ.ವಿ. ನಾರಾಯಣ ಅವರು ಅನಾಥ ಬೀದಿ ನಾಯಿಯ ಮರಿಯೊಂದನ್ನು ಸಾಕಿಕೊಂಡಿದ್ದಾರೆ. ಅದನ್ನು ಕವಿ ಸ. ರಘುನಾಥ್ ಅವರು 'ಜ್ಯೋತಿಲಕ್ಷ್ಮಿ' ಎಂದು ಕರೆಯುತ್ತಾರೆ. ಅದನ್ನು ಮೊದಲ ಸಲ ನೋಡಿದಾಗ ಅವರಿಗೆ ಅದರ ಸೊಂಟ ಜ್ಯೋತಿಲಕ್ಷ್ಮಿಯವರ ಬಳುಕು ಸೊಂಟದಂತೆ ಕಂಡಿತ್ತಂತೆ. ರಘುನಾಥ ಜ್ಯೋತಿಕ್ಷ್ಮಿಯವರ ಅಭಿಮಾನಿ!

ರೆಬೆಲ್ ಸ್ಟಾರ್ ಅಂಬರೀಶ್ ಸಾಕಿದ್ದ ಮುದ್ದಿನ ನಾಯಿ ಕನ್ವರ್. 'ಅಂತ' ಸಿನಿಮಾದಲ್ಲಿ ಅಂಬರೀಶ್ ಅವರ ಪಾತ್ರದ ಹೆಸರು ಕೂಡ ಕನ್ವರ್. ಇದೇ ಹೆಸರನ್ನು ಅವರು ತಮ್ಮ ನಾಯಿಗೆ ಇಟ್ಟಿದ್ದರು. ಮಹಾಭಾರತ ಯುದ್ಧದ ನಂತರ ಎಲ್ಲರೂ ಸ್ವರ್ಗಸ್ಥರಾದ ಮೇಲೆ ಒಂಟಿಯಾಗಿದ್ದ ಧರ್ಮರಾಯನ ಜೊತೆಯಲ್ಲಿ ಯಮಧರ್ಮ ನಾಯಿಯಾಗಿ ಪಯಣಿಸಿದ ಕಥೆಯೂ ಇದೆ. ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಹೆಗಡೆಯವರ ಮನೆಯ ಆಳು ಗುತ್ತಿ ಹಾಗೂ ಸದಾ ಅವನ ಜೊತೆಯಾಗಿದ್ದ ನಾಯಿ ಹುಲಿಯನಿಗೂ ಅವಿನಾಭಾವ ಸಂಬಂಧ.

"ನಾನು ತೋಟ ಮಾಡಲು ಆರಂಭಿಸಿದ ಮೊದಲ ವರ್ಷಗಳಲ್ಲಿ ಹೆಗಲ ಮೇಲೆ ಕೋವಿ ಹಾಕಿಕೊಂಡು ದಿನವಿಡೀ ಕಿವಿಯೊಂದಿಗೆ ಅಲೆಯುವುದು ನನ್ನ ಕೆಲಸವಾಗಿತ್ತು. ಓದುವುದು, ಬರೆಯುವುದು, ಎಲ್ಲದಕ್ಕೂ ತಿಲಾಂಜಲಿಯಿಟ್ಟು, ನಿರ್ಜನ ಕಾಡುಗಳಲ್ಲಿ ಗೊತ್ತು ಗುರಿಯಿಲ್ಲದೆ ಅಲೆಯುತ್ತಿರುವ ನನ್ನನ್ನು ನೋಡಿ ಅನೇಕರು ಇವನು ಸಂಪೂರ್ಣ ಹಾಳಾದನೆಂದು ವ್ಯಸನದ ನಗುವನ್ನು ಸೂಚಿಸಿದವರಿದ್ದಾರೆ. 'ಎಂಥವರಿಗೆ ಎಂಥಾ ಮಗ' ಎಂದು ವಿಷಾದಪಟ್ಟವರೂ ಅನೇಕರಿದ್ದಾರೆ. ಕೆಲವರು 'ಈ ನಾಯಿಯ ದೆಸೆಯಿಂದ ಹಾಳಾದ' ಎಂದು ಕಿವಿಯನ್ನೂ ದೂಷಿಸಿದವರೂ ಇದ್ದಾರೆ" ಎಂದಿದ್ದಾರೆ ತೇಜಸ್ವಿ.

ಎಲೆಕ್ಟ್ರಾನಿಕ್ ಸಿಟಿ ಬಹುರಾಷ್ಟ್ರೀಯ ಕಂಪನಿಗಳ ಹಬ್. ನಮ್ಮದು ಜಪಾನ್ ದೇಶದ ರೋಬೊ ತಯಾರಿಸುವ ಕಂಪನಿ. ವಿಶಾಲ ಹಸಿರಿನ ಗಿಡ ಮರಗಳು. ಒಂದು ಮಿನಿ ಫಾರೆಸ್ಟ್ ಎಂದು ನೋಡಿದವರಿಗೆ ಅನ್ನಿಸುವುದು. ಅದು ಹೇಗೋ ಹೊಟ್ಟೆ ಬೆನ್ನಿಗೆ ಅಂಟಿದ, ಎಲುಬುಗಳನ್ನು ಎಣಿಸಬಹುದಾದ ಗೋಧಿ ಬಣ್ಣದ ನಾಯಿಯೊಂದು ಕಂಪನಿಯ ಒಳಗೆ ನುಸುಳಿತು. ಅದನ್ನು ಕಂಡ ಭದ್ರತಾ ಸಿಬ್ಬಂದಿಯವರು ಅದನ್ನು ಹೊರಗಟ್ಟಲು ಹರಸಾಹಸ ಪಡುತ್ತಿದ್ದರು. ಟಾಯ್ಲೆಟ್ ಒಂದು ಬಿಟ್ಟು ಎಲ್ಲೆಡೆ ಸಿಸಿ ಕ್ಯಾಮೆರಾಗಳು ಕಣ್ಣುಗಳನ್ನು ತೆರೆದೇ ಇದ್ದವು.

ತಮ್ಮ ಅಪಾರದರ್ಶಕ ಗಾಜಿನ ಕ್ಯಾಬಿನ್‌ನಲ್ಲಿ ಕುಳಿತು ಟಿ.ವಿ. ಪರದೆಯಲ್ಲಿ ಗಾರ್ಡ್ ನಾಯಿಯನ್ನು ಹಿಡಿಯುವ ಪ್ರಯತ್ನವನ್ನು ಗಮನಿಸಿದ ಕಂಪನಿ ಮುಖ್ಯಸ್ಥರಿಗೆ ಕರುಳು ಚುರ್ ಎಂದಿತ್ತು. ಮೊದಲೇ ಅವರು ಅಹಿಂಸಾಪ್ರಿಯರು. ಮೆಟ್ಟಿಲಿಳಿದು ನೇರವಾಗಿ ಗಾರ್ಡ್ ಬಳಿ ಹೋಗಿ ತಮ್ಮ ಇಂಗ್ಲಿಷ್, ಹಿಂದಿ ಭಾಷೆಯಲ್ಲಿ ಒಂದೇ ಸಮನೆ ಅಷ್ಟೋತ್ತರ ಆರಂಭಿಸಿದರು. ಭಾಷೆ ತಿಳಿಯದ ಗಾರ್ಡ್ ಅವರನ್ನು ಬಾಯಿಬಿಟ್ಟುಕೊಂಡು ನೋಡುತ್ತಿದ್ದರೆ, ನಾಯಿ ಕೂಡ ಗಾಬರಿಯಿಂದ ಅವರನ್ನೇ ವಿಸ್ಮಯದಿಂದ ನೋಡುತ್ತ ನಿಂತಿತ್ತು. ಈ ಪ್ರಸಂಗದ ನಂತರ ಗಾರ್ಡ್ ಕಾಣಿಸಲಿಲ್ಲ. ಆದರೆ ನಾಯಿಗೆ ಘನವಾದ ಮರ್ಯಾದೆ ಸಿಕ್ಕಿತು. ಅವರು ನಾಯಿಯನ್ನು ಪ್ರೀತಿಯಿಂದ ಮೋತಿ ಎಂದು ಕರೆಯುತ್ತಿದ್ದರು. ಆ ನಾಯಿ, ಕ್ಷಮೆ ಇರಲಿ, ನಾಯಿಯನ್ನು ನಾಯಿ ಎಂದು ಕರೆದರೆ ಅವರು ಕಾಳಿಮಾತೆಯ ಅವತಾರ ತಳೆಯುತ್ತಿದ್ದರು.

ಒಂದೆರಡು ದಿನಗಳಲ್ಲಿ ಮೋತಿಯನ್ನು ನೋಡಿಕೊಳ್ಳಲು ಒಬ್ಬ ವ್ಯಕ್ತಿಯನ್ನು ನೇಮಿಸಿದರು. ಅವನಿಗೆ ದಿನದ ಟೈಮ್ ಟೇಬಲ್, ವಾರ ಮತ್ತು ತಿಂಗಳಲ್ಲಿ ಮಾಡಬೇಕಾದ ಕೆಲಸಗಳ ಪಟ್ಟಿ ಮಾಡಿ ಮೋತಿಯ ಮನೆಯ ಎದುರಿಗೆ ನೇತು ಹಾಕಿದರು. ಬೆಳಗ್ಗೆ ಹಾಲು, ಮಧ್ಯಾಹ್ನ ಊಟ, ಸಾಯಂಕಾಲ ಬಗೆ ಬಗೆಯ ಬಿಸ್ಕೆಟ್. ಮೋತಿಗೆ ವಾರಕ್ಕೊಮ್ಮೆ ಬಲವಂತದ ಮಾಘಸ್ನಾನ. ಅದಕ್ಕೆಂದೇ ತಯಾರಿಸಿದ ಸೋಪ್, ಕಿರಿಕಿರಿ ಉಂಟು ಮಾಡುವ ಕೀಟಗಳು ಮುತ್ತದ ಹಾಗೆ ಬೇವಿನ ಎಣ್ಣೆ. ರೋಗ ನಿರೋಧಕ ಲಸಿಕೆ. ಕಾರಿನಲ್ಲಿ ವಾರಕ್ಕೊಮ್ಮೆ ಡಾಗ್ ಪಾರ್ಕ್‌ಗೆ ವಿಹಾರಕ್ಕೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಡಾಗ್ ಜಿಮ್, ಸ್ವಿಮ್ಮಿಂಗ್ ಮತ್ತು ಓಡಾಡಲು ಪಾರ್ಕ್. ಉಗ್ರವಾಗಿದ್ದರೆ ಶಮನಗೊಳಿಸಲು ವ್ಯಕ್ತಿತ್ವ ವಿಕಸನದ ಶಿಬಿರಗಳು. ಒಂದೇ ಎರಡೇ?

ಒಣಗಿಕೊಂಡಿದ್ದ ನಮ್ಮ ಮೋತಿ ಕೆಲವು